

ಮದುವೆ, ಸಮಾರಂಭಗಳಿಗೆಂದು ಮಾಡಿಕೊಂಡ ಮೇಕಪ್ ಕೆಲ ಸಮಯ ಕಳೆಯುತ್ತಿದ್ದಂತೆ ಅಳಿಸಿ ಹೋಗಲು ಶುರುವಾಗುತ್ತದೆ. ಬೆವರು, ನೀರು ತಾಗಿದರಂತೂ ಮೇಕಪ್ ದೊಡ್ಡ ಕಿರಿಕಿರಿಯಾಗಿಬಿಡುತ್ತದೆ. ಸುಂದರವಾಗಿ ಕಾಣಬೇಕೆಂದು ಮಾಡಿಕೊಂಡ ಅಲಂಕಾರವೇ ರಗಳೆಯಾಗುತ್ತದೆ. ಇಂಥ ರಗಳೆಗಳಿಂದ ದೂರ ಉಳಿಯಲೆಂದೇ ಇದೀಗ 'ವಾಟರ್‌ಪ್ರೂಫ್ ಮೇಕಪ್' (ಜಲನಿರೋಧಕ) ಮತ್ತೆ ಮುನ್ನೆಲೆಗೆ ಬಂದಿದೆ.

ಮುಖಕ್ಕೆ ಮಾಡಿಕೊಂಡ ಸಿಂಗಾರ ಹೆಚ್ಚು ಕಾಲ ಉಳಿಯುವಂತೆ ಮಾಡುವ ಜೊತೆಗೆ ಇನ್ನಷ್ಟು ಮೆರುಗು ನೀಡುವ ಈ ವಾಟರ್‌ಪ್ರೂಫ್ ಮೇಕಪ್ ವಿಧಾನ ಸದ್ಯ ಟ್ರೆಂಡ್‌ನಲ್ಲಿದೆ. ತೇವಾಂಶವನ್ನು ತಡೆದು ಸೌಂದರ್ಯ ಹೆಚ್ಚಿಸಬಲ್ಲ ಈ ಮೇಕಪ್‌ಗೆ ಮಹಿಳೆಯರಿಂದ ಬೇಡಿಕೆಯೂ ಹೆಚ್ಚಿದೆ. ಥರಾವರಿ ಜಲನಿರೋಧಕ ಮೇಕಪ್ ಸಾಮಗ್ರಿಗಳು ಕೂಡ ಮಾರುಕಟ್ಟೆಗೆ ದಾಂಗುಡಿ ಇಡುತ್ತಿವೆ.

ಅಂದ ಹಾಗೆ ಈ ವಾಟರ್‌ಪ್ರೂಫ್ ಮೇಕಪ್ ಎಂಬ ಪರಿಕಲ್ಪನೆ ತೀರಾ ಹೊಸತೇನಲ್ಲ. 1938ರಲ್ಲಿಯೇ ಹೀಗೊಂದು ಮೇಕಪ್ ಸಾಮಗ್ರಿ ಮಾರುಕಟ್ಟೆಗೆ ಅಡಿಯಿಟ್ಟಿತ್ತು. ಮೊದಲ ಜಲನಿರೋಧಕ ಮಸ್ಕರಾವನ್ನು ಅದಾಗಲೇ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿತ್ತು. ಆದರೆ ಈಚೆಗೆ ಈ ಪರಿಕಲ್ಪನೆ ಮತ್ತೆ ಸದ್ದು ಮಾಡುತ್ತಿದೆ. ಮಸ್ಕರಾ, ಸೆಟ್ಟಿಂಗ್ ಸ್ಪ್ರೇ, ಫೌಂಡೇಷನ್, ಪೆನ್ಸಿಲ್ ಐಲೈನರ್, ಕನ್ಸೀಲರ್, ಐಶ್ಯಾಡೊ, ಲಿಪ್‌ಸ್ಟಿಕ್, ಐಬ್ರೋ ಜೆಲ್, ಪೌಡರ್, ಬ್ರೋಂಜರ್... ಹೀಗೆ ಪ್ರತಿ ಮೇಕಪ್ ಸಾಮಗ್ರಿ ಕೂಡ ವಾಟರ್‌ಪ್ರೂಫ್ ಎಂಬ ಹಣೆಪಟ್ಟಿಯೊಂದಿಗೆ ಜಾಗ ಗಿಟ್ಟಿಸಿಕೊಳ್ಳುತ್ತಿದೆ. ಈ ಸಾಮಗ್ರಿಗಳ ಬಳಕೆ ಕೂಡ ಹೆಚ್ಚಾಗಿದೆ.

ವಾಟರ್‌ಪ್ರೂಫ್ ಮೇಕಪ್ ಸಾಮಗ್ರಿಗಳಲ್ಲಿ ಸಾಮಾನ್ಯವಾಗಿ ಸಿಲಿಕೋನ್‌ಗಳು ಹಾಗೂ ಅಕ್ರಿಲೇಟ್ಸ್‌ಗಳೆಂಬ ಅಂಶಗಳ ಬಳಕೆ ಇರುತ್ತದೆ. ಬಹುಪಾಲು ಸೌಂದರ್ಯವರ್ಧಕಗಳಲ್ಲಿ ಬಳಸಲಾಗುವ ಸಿಲಿಕೋನ್ ಅಂಶ ಚರ್ಮವನ್ನು ಮೃದುವಾಗಿ ಕಾಣುವಂತೆ ಮಾಡುತ್ತದೆ. ಅಕ್ರಿಲೇಟ್ಸ್ ಅಂಶ ಜಲನಿರೋಧಕವಾಗಿದ್ದು, ಹಚ್ಚಿಕೊಂಡ ಮೇಕಪ್ ಮುಖದ ಮೇಲೆ ಗಟ್ಟಿಯಾಗಿ ಕೂರುವಂತೆ ಮಾಡುತ್ತದೆ. ಹೀಗಾಗಿ ಹೆಚ್ಚಿನ ಅವಧಿ ಮೇಕಪ್ ಉಳಿಯುವಂತೆ ಮಾಡಲು ಹಾಗೂ ಕಲೆಗಳನ್ನು ಮರೆಮಾಚಿ ಸುಂದರವಾಗಿ ಕಾಣಲು ಈ ಮೇಕಪ್‌ನತ್ತ ಒಲವು ಹೆಚ್ಚಾಗಿದೆ.

ಈ ಮೇಕಪ್ ವಿಧಾನ ಟ್ರೆಂಡ್ ಆಗಲು ಕಾರಣವೇನು? ಯಾರು ಈ ಮೇಕಪ್ ಅನ್ನು ಮೆಚ್ಚುತ್ತಾರೆ? ಈ ಪ್ರಶ್ನೆಗಳಿಗೆ ಗ್ಲಾಮ್‌ಡಸ್ಟ್ ಮೇಕ್‌ಓವರ್ ಸ್ಟುಡಿಯೊದ ಮೇಕಪ್ ಕಲಾವಿದೆ ಲಕ್ಷ್ಮಿ ಶೆಟ್ಟಿ ಅವರು ನೀಡುವ ವಿವರಣೆ ಹೀಗಿದೆ...

'ವಾಟರ್‌ಪ್ರೂಫ್ ಮೇಕಪ್ ಎಂಬ ಪರಿಕಲ್ಪನೆ ಮೊದಲಿನಿಂದಲೂ ಇತ್ತು. ಆದರೆ ಅದರೆಡೆಗೆ ಯಾರೂ ಹೆಚ್ಚು ಗಮನ ಕೊಟ್ಟಿರಲಿಲ್ಲ. ಇದೀಗ ಈ ವಿಧಾನ ಮತ್ತೆ ಟ್ರೆಂಡ್‌ನಲ್ಲಿದೆ. ವಾಟರ್‌ಪ್ರೂಫ್ ಮೇಕಪ್ ಸಾಮಗ್ರಿಗಳ ಬಗ್ಗೆ ಹೆಚ್ಚು ಪ್ರಸ್ತಾಪವೂ ಆಗುತ್ತಿದೆ. ಮೊದಲು ಹವಾಮಾನಕ್ಕೆ ತಕ್ಕಂತೆ ಮೇಕಪ್ ಇರುತ್ತಿತ್ತು. ಬಿಸಿಲ ಕಾಲದಲ್ಲಿ, ಮಳೆಗಾಲದಲ್ಲಿ ಹವಾಮಾನಕ್ಕೆ ತಕ್ಕಂತೆ ಮೇಕಪ್ ಮಾಡಿಕೊಳ್ಳುವ ರೂಢಿ ಇತ್ತು. ಆದರೆ ಈಗ ಹವಾಮಾನವನ್ನು ಊಹಿಸಲು ಸಾಧ್ಯವಿಲ್ಲ. ಹೀಗಾಗಿ ಎಲ್ಲಾ ಕಾಲಕ್ಕೆ ಒಗ್ಗಿಕೊಳ್ಳುವಂಥ ಮೇಕಪ್ ವಿಧಾನವನ್ನು ಬಯಸುವುದು ಸಹಜ. ವಾಟರ್‌ಪ್ರೂಫ್ ಮೇಕಪ್ ಇದಕ್ಕೆ ಸೂಕ್ತವೆನಿಸಿದೆ. ಸಾಮಾನ್ಯ ಮೇಕಪ್‌ನಲ್ಲಿ, ಮುಖದ ಮೇಲೆ ನೀರು ಬೀಳುತ್ತಿದ್ದಂತೆ ಮೇಕಪ್ ಕರಗಲು ಆರಂಭವಾಗುತ್ತದೆ. ಆದರೆ ಈ ವಿಧಾನದಲ್ಲಿ ಚರ್ಮದ ಮೇಲೆ ನೀರು ನಿಲ್ಲುವುದಾಗಲೀ, ಕರಗುವುದಾಗಲೀ ಆಗುವುದಿಲ್ಲ. ಈ ಮೇಕಪ್ ಸಾಮಗ್ರಿಗಳಲ್ಲಿ ಎಣ್ಣೆಯ ಅಂಶ ಹೆಚ್ಚಿರುವುದರಿಂದ, ಎಣ್ಣೆ ಮೇಲೆ ನೀರು ಬಿದ್ದರೆ ಹೇಗೆ ಜಾರುತ್ತದೋ ಹಾಗೆಯೇ ಮುಖದ ಮೇಲೂ ನೀರು ನಿಲ್ಲದೇ ಮೇಕಪ್ ಅನ್ನು ಹಿಡಿದಿಡುತ್ತದೆ'.

'ಮೇಕಪ್ ಹೆಚ್ಚು ಹೊತ್ತು ಉಳಿಯಬೇಕು ಎಂದು ಮಹಿಳೆಯರು ಬಯಸುವುದು ಸಾಮಾನ್ಯ. ಅವರ ಈ ನಿರೀಕ್ಷೆಗೆ ಈ ಮೇಕಪ್ ವಿಧಾನ ಉತ್ತಮವಾಗಿದೆ. ಸುಂದರವಾಗಿ, ನೈಸರ್ಗಿಕವಾಗಿ ಕಾಣುವ ಈ ಮೇಕಪ್ ಇದೇ ಕಾರಣಕ್ಕೇ ಬೇಡಿಕೆ ಹೆಚ್ಚಿಸಿಕೊಂಡಿದೆ' ಎಂದು ಹೇಳುತ್ತಾರೆ ಅವರು. ಇದರೊಂದಿಗೆ, ಮೇಕಪ್‌ಗೆ ಬಳಸುವ ಸಾಮಗ್ರಿಗಳ ಗುಣಮಟ್ಟ ಹಾಗೂ ಮೇಕಪ್ ತಂತ್ರ ಕೂಡ ಬಹುಮುಖ್ಯ ಸಂಗತಿಯಾಗಿದೆ. ಸಾಮಾನ್ಯ ಮೇಕಪ್‌ನಂತಲ್ಲದೇ ವಾಟರ್‌ಪ್ರೂಫ್ ಮೇಕಪ್‌ಗೆಂದೇ ಕೆಲವು ತಂತ್ರಗಳನ್ನು ಬಳಸಬೇಕಾಗುತ್ತದೆ. ಇದಕ್ಕೆ ಪ್ರತ್ಯೇಕ ಮೇಕಪ್ ಸಾಮಗ್ರಿಗಳನ್ನು ಇಟ್ಟುಕೊಳ್ಳುವುದು ಉತ್ತಮ. ಎಲ್ಲಕ್ಕಿಂತ ಮುಖ್ಯವಾಗಿ, ಮೇಕಪ್ ಸಾಮಗ್ರಿಗಳ ಬಳಕೆ ಕುರಿತು ಜಾಗರೂಕರಾಗಿರಬೇಕು. ತ್ವಚೆಗೆ ಹೊಂದುವಂಥ, ಯಾವುದೇ ಅಡ್ಡ ಪರಿಣಾಮ ಬೀರದ, ಚರ್ಮದ ಗುಣಮಟ್ಟವನ್ನು ಹೆಚ್ಚಿಸುವಂಥ ಸಾಮಗ್ರಿಗಳನ್ನು ಆಯ್ಕೆ ಮಾಡಿಕೊಳ್ಳುವುದು ತುಂಬಾ ಮುಖ್ಯ' ಎಂದು ಸಲಹೆ ನೀಡುತ್ತಾರೆ.

'ಈ ಮೇಕಪ್ ವಿಧಾನದಲ್ಲಿ ಅಕ್ವಾಬೇಸ್ ಮಾಯಿಶ್ಚರೈಸರ್, ಆಯಿಲ್ ಫ್ರೀ ಪ್ರೈಮರ್ ಬಳಕೆ ಮೂಲತಂತ್ರವಾಗಿರುತ್ತದೆ. ಸ್ಪ್ರೇ ಉಪಯೋಗಿಸದೇ ಜಲನಿರೋಧಕ ಫೌಂಡೇಷನ್ ಬಳಸಲಾಗುತ್ತದೆ. ಕೊನೆಗೆ ಲೂಸ್ ಪೌಡರ್ ಬಳಕೆ ಮಾಡಲಾಗುತ್ತದೆ. ಹೀಗೆ ಮಾಡುವುದರಿಂದ ನೀರು ತಾಗಿದರೂ ಮೇಕಪ್ ಕರಗಲು ಅವಕಾಶವಿರುವುದಿಲ್ಲ.

> ಮುಖಕ್ಕೆ ಮಾಡಿಕೊಂಡ ಅಲಂಕಾರ ಹೆಚ್ಚು ಕಾಲ ಉಳಿಯುವಂತೆ ಮಾಡುವ ಜೊತೆಗೆ ಇನ್ನಷ್ಟು ಮೆರುಗು ನೀಡುತ್ತದೆ ಈ ವಾಟರ್‌ಪ್ರೂಫ್ ಮೇಕಪ್
>
> **-ಲಕ್ಷ್ಮಿ ಶೆಟ್ಟಿ,** ಸೌಂದರ್ಯತಜ್ಞೆ



ಅನಂತರ ಕಣ್ಣಿಗೆ, ತುಟಿಗಳಿಗೆ ಪ್ರತ್ಯೇಕ ರೀತಿಯ ಮೇಕಪ್ ಮಾಡಲಾಗುತ್ತದೆ. ತುಟಿಗಳಿಗೆ ಗ್ಲಾಸಿ ರೀತಿ ಲಿಪ್‌ಸ್ಟಿಕ್ ಹಾಕಲಾಗುತ್ತದೆ. ನೀರು ಬಿದ್ದಾಗಲೂ ಅದು ಅಳಿಸುವುದಿಲ್ಲ. ಕಣ್ಣಿಗೆ ಐಬೇಸ್ ಪ್ರೈಮರ್ ಬಳಸಿ ನಂತರ ಮೇಕಪ್ ಮಾಡುವುದರಿಂದ ಅಳಿಸಿಹೋಗುವುದಿಲ್ಲ' ಎಂದು ಮೇಕಪ್ ವಿಧಾನದ ಕುರಿತು ವಿವರಣೆ ನೀಡುತ್ತಾರೆ ಲಕ್ಷ್ಮಿ ಶೆಟ್ಟಿ.

## ಹೊರಾಂಗಣಕ್ಕೆ ಹೆಚ್ಚು ಸೂಕ್ತ

ಒಳಾಂಗಣಕ್ಕಿಂತ ಹೊರಾಂಗಣದಲ್ಲಿ ಈ ಮೇಕಪ್ ಉಪಯೋಗ ಹೆಚ್ಚು. ಪ್ರೀವೆಡ್ಡಿಂಗ್ ಫೋಟೊಶೂಟ್‌ಗಳಿಗೆ, ಡೆಸ್ಟಿನೇಷನ್ ಶೂಟ್, ಮದುವೆ, ಸಮಾರಂಭಗಳಿಗೆ ಈ ರೀತಿಯ ಮೇಕಪ್ ಮಾಡಿಸಿಕೊಳ್ಳುವವರ ಸಂಖ್ಯೆ ಹೆಚ್ಚಾಗಿದೆ. ಸಾಮಾನ್ಯ ರೀತಿಯ ಮೇಕಪ್, ಒಳಾಂಗಣದಲ್ಲಿ ಸುಮಾರು ಐದಾರು ಗಂಟೆಯವರೆಗೂ ಇರುತ್ತದೆ. ಆದರೆ ವಾಟರ್‌ಪ್ರೂಫ್ ಆದಲ್ಲಿ ಸುಮಾರು ಎಂಟು ಗಂಟೆಯವರೆಗೂ ಉಳಿಯಬಲ್ಲದು. ಹೊರಾಂಗಣದಲ್ಲಿ ಕೂಡ ಯಾವುದೇ ವಾತಾವರಣದಲ್ಲಿಯೂ ಮೇಕಪ್ ಏಳೆಂಟು ಗಂಟೆಗಳವರೆಗೂ ಹಾಗೇ ಇರಬಲ್ಲದು.

ಈ ಹಲವು ಕಾರಣಗಳಿಂದಾಗಿ ವಾಟರ್‌ಪ್ರೂಫ್ ಮೇಕಪ್ ವಿಧಾನ ಹೆಚ್ಚು ಸದ್ದು ಮಾಡುತ್ತಿದ್ದು, ಇದರತ್ತ ಮಹಿಳೆಯರ ಒಲವೂ ಹೆಚ್ಚಾಗಿದೆ. ■